

**ಎಡದಿಂದ ಬಲಕ್ಕೆ**

1. ಸಂಪು ಹೂಡುವುದನ್ನು ತಪ್ಪಿಸಲೆಂದು ಸುಮ್ಮನೇ ಹಣ ನೀಡಿದರೇ? 4
3. ಒಲ್ಲೆ ಎನ್ನಲೇ ಭಯಪಡುತ್ತಾನೆ ಆಕೆಯ ಗಂಡ 3
4. ಹಕ್ಕು ಕೇಳಲು ಹೋಗಿದ್ದಕ್ಕೆ ಇಂಥ ವ್ಯಂಗ್ಯ ಮಾತು 3
6. ವರ್ಷಕ್ಕೆಲ್ಲ ಒಂದೇ ಬಾರಿ ಮಳೆಯ ಋತುಮಾನ 4
7. ಆನೆಯ ಹತ್ತಿರ ಓಡಿದ್ದಾಯಿತು; ಆಮೇಲೆ...? 4
9. ಕಿಂಚಿತ್ತೂ ವಿಕೃತಿ ಇಲ್ಲದ ಎಂಥ ವೈಭವದ ನಿರ್ಮಿತಿ! 4
11. ಆಳವಾದ ಹಳ್ಳ ತೆಗೆದು ನಿರ್ಮಿಸಿರುವುದು ಇದೆಂಥ ಅಡಿಪಾಯ? 4
13. ಎಂಥ ಶೋಚನೀಯ ಪರಿಸ್ಥಿತಿಯಲ್ಲಿದ್ದಾಳೆ ನೋಡಿ, ರಾಕ್ಷಸಿ 4
15. ಬೆಣ್ಣೆ ಬೇರೆಲ್ಲೂ ಸಿಗದಂತೆ ಮಾಡಿದ್ದು ಇದೇ ಅಡುಗೆಯವ 4
17. ತಮ್ಮಲ್ಲಿಲ್ಲದ್ದನ್ನೆಲ್ಲ ದೋಚಿ ತರಲೆಂದು ಈ ಯುದ್ಧ 3
18. ಮೂರ್ತಿಯನ್ನೇ ಅಲುಗಿಸುವಂತೆ ಬೀಸುತ್ತಿದೆ ಗಾಳಿ 3
19. ಕಿಂಕರನಾದವನ ಸ್ಥಿತಿ ಕಂಡರೇ ಅಯ್ಯೋ ಪಾಪ ಎನಿಸುತ್ತದೆ 4

**ಮೇಲಿನಿಂದ ಕೆಳಕ್ಕೆ**

1. ಇಂಥ ಸ್ವಭಾವವೂ ಬದಲಾಗುವ ಸಾಧ್ಯತೆ ಇದೆಯೇ? 3
2. ನೇಗಿಲ ಯೋಗಿಗೆ ಪ್ರಾಸ ಜೋಡಿಸುವಂತಿರುವ ಪಾಂಡವ ಗೊತ್ತೇ? 3
3. ತಾವರೆಗಳನ್ನೇ ತರಬೇಕೆಂದು ಭಾರೀ ಒತ್ತಾಯ 3
5. ಕರೆತರುವುದು ಆತ ಮಾಡಲೇಬೇಕಾದ ಕೆಲಸ 3
7. ಅನ್ಯರ ಬಗೆಗಿನ ಈ ವೃತ್ತಾಂತವೆಲ್ಲ ಬರೀ ಸುಳ್ಳು 3
8. ರೋಷದಿಂದಲೇ ಹಣ ಸಂದಾಯ ಮಾಡಿದ ದಾಖಲೆ? 3
9. ಭವ್ಯವಾದದ್ದೇನೇ ಇದ್ದರೂ ಅದಕ್ಕೆಲ್ಲ ಕಾರಣ ಶಿವನ ಸತಿ 3
10. ಎಷ್ಟೇ ಜೋರಿನಿಂದ ತೆಗೆದರೂ ತೆರೆಯದ ಭದ್ರ ಪೆಟ್ಟಿಗೆ 3
12. ಹೊಳೆಯುತ್ತಿದೆ ಸರಿ. ಆದರೂ ಅದು ಹೊಸದೇನಲ್ಲ 3
14. ಶತಾಶ್ವಗಳ ಒಕ್ಕೂಟದ ಈ ಅಚ್ಚರಿ ಎಂದಿಗೂ ಅಳಿಯುವಂಥದಲ್ಲ 3
15. ಅಷ್ಟೂ ಬೇಳೆಕಾಳುಗಳನ್ನು ಹೊತ್ತು ತರಲು ಈ ಬಾಲಕನೇ ಸಾಕೇ? 3
16. ಗಾಂಭೀರ್ಯದ ಪರಿಚಯವೂ ಇಲ್ಲದ ಹಳ್ಳಿ ಮನುಷ್ಯ 3

## 20–07–2023 ಉತ್ತರಗಳು

**ಎಡದಿಂದ ಬಲಕ್ಕೆ**

1. ಸಂಭಾವಿತ 3. ಕರಾಗ್ರ 4. ರುಸುಮು 6. ಹರಿವಾಣ 7. ಅಂಬುಧಿ 9. ಸಾಗರ 11. ಶಬರ 13. ಸಹನೆ 15. ಅಭಿಷೇಕ 17. ರಮಿಸು 18. ಕರುಣೆ 19. ರಮ್ಯಭಾವ

**ಮೇಲಿನಿಂದ ಕೆಳಕ್ಕೆ**

1. ಸಂಗ್ರಹ 2. ತರುಣ 3. ಕರುಬು 5. ಮುರುಗ 7. ಅಂಕುಶ 8. ಧಿಕ್ಕಾರ 9. ಸಾಹಸ 10. ರವಾನೆ12. ಬವರ 14. ಹರಿಣಿ 15. ಅಸುರ 16. ಕಕವ

ಪ್ರಶ್ನಾಂಕಣ

# ಗೂನು ತಿಮಿಂಗಿಲ: ಏನು ವಿಶೇಷ?

ಗೂನು ತಿಮಿಂಗಿಲ (Humpback Whale) ಈಗಿರುವ ತಿಮಿಂಗಿಲಗಳ ಒಟ್ಟು 90 ಪ್ರಭೇದಗಳಲ್ಲಿ ಒಂದು ಪ್ರಮುಖ ವಿಧವಾಗಿರುವ ಗೂನು ತಿಮಿಂಗಿಲ ಹಲ್ಲುಗಳಿಲ್ಲದ 'ಬಲೀನ್ ತಿಮಿಂಗಿಲ'ಗಳ ಗುಂಪಿಗೆ ಸೇರಿದೆ. ಈ ತಿಮಿಂಗಿಲಗಳ ವೈಶಿಷ್ಟ್ಯಗಳು ಹಲವರು. ಪ್ರಮುಖವಾಗಿ–

- ಗೂನು ತಿಮಿಂಗಿಲಗಳ ಬೆನ್ನಿನ ಮೇಲಿರುವ ಈಜು ರೆಕ್ಕೆಯ ಮುಂಬದಿಯ ಸಮೀಪ ಗುಮ್ಮಟದಂತಹ ಒಂದು ಉಬ್ಬು ಇದೆ. ಅದರಿಂದಾಗಿ ಇದರ ಬೆನ್ನು ಗೂನು ಬೆನ್ನಿನಂತೆ ಕಾಣುತ್ತದೆ. ಅದಕ್ಕೇ ಈ ತಿಮಿಂಗಿಲಕ್ಕೆ ಗೂನು ತಿಮಿಂಗಿಲ ಎಂಬ ರೂಪಾನ್ವಯ ಹೆಸರು. ನೀರಿನಲ್ಲಿ ಮುಳುಗುವಾಗಲೂ ಇದು ಬೆನ್ನನ್ನು ಬಗ್ಗಿಸಿ ಬಗ್ಗಿಸಿ ಮುಳುಗುತ್ತದೆ. ಈಜುವ ಈ ಕ್ರಮವೂ ಈ ತಿಮಿಂಗಿಲದ ಹೆಸರಿಗೆ ಮತ್ತೊಂದು ಕಾರಣ.
- ವಯಸ್ಕ ಗೂನು ತಿಮಿಂಗಿಲಗಳ (ಚಿತ್ರ 2, 3) ಶರೀರದ ಉದ್ದ ಗರಿಷ್ಠ 50 ಅಡಿ; ತೂಕ 35 ಟನ್; ಗರಿಷ್ಠ ಆಯುಷ್ಯ 80 ವರ್ಷ! ಸುಮಾರು 16 ತಿಂಗಳ ಗರ್ಭವಾಸದ ನಂತರ ಮರಿ ಜನಿಸುತ್ತದೆ. ಹುಟ್ಟುವಾಗಲೇ ಮರಿಯ ಉದ್ದ 16 ಅಡಿ! ತೂಕ 900 ಕಿಲೋ! ಹತ್ತು ತಿಂಗಳುಗಳ ವರೆಗೆ (ಚಿತ್ರ 1) ತಾಯಿಯ ಹಾಲನ್ನಷ್ಟೇ ಕುಡಿದು ಬೆಳೆಯುವ ಮರಿಯ ತೂಕ ದಿನಕ್ಕೆ 40 ಕಿಲೋ ಗ್ರಾಂ ಏರುತ್ತದೆ; ಉದ್ದ ದಿನಕ್ಕೆ ಒಂದು ಅಂಗುಲ ಹೆಚ್ಚುತ್ತದೆ. ತಿಮಿಂಗಿಲದ ಹಾಲಿನಲ್ಲಿ ಕೊಬ್ಬಿನ ಅಂಶ ಶೇ. 60ರಷ್ಟಿರುತ್ತದೆ (ಹಸುವಿನ ಶುದ್ಧ ಹಾಲಿನಲ್ಲಿರುವ ಕೊಬ್ಬಿನ ಅಂಶ ಶೇ. 3.4)
- ವಯಸ್ಕ ಗೂನು ತಿಮಿಂಗಿಲಗಳಿಗೆ ಪ್ರತಿ ದಿನಕ್ಕೆ ಎಂಟು ಟನ್ ಆಹಾರ ಬೇಕು. ಕ್ರಿಲ್‌ಗಳು ಮತ್ತು ಪುಟ್ಟ ಮೀನುಗಳೇ ಅವುಗಳ ಪ್ರಧಾನ ಆಹಾರ. ದೊಡ್ಡದಾಗಿ ಬಾಯ್ದೆರೆದು, ಕಡಲ ನೀರನ್ನು ಬಾಯ್ದುಂಬ ತುಂಬಿಕೊಂಡು ಅರ್ಧ ಬಾಯ್ಮುಚ್ಚಿ ಬಾಯಿಯ ಮುಂಭಾಗದ ಬಾಚಣಿಗೆಯಂತಹ ಬಲೀನ್‌ನ ಮೂಲಕ ಈ ತಿಮಿಂಗಿಲಗಳು ನೀರನ್ನೆಲ್ಲ ಸೋಸಿ ಹೊರಬಿಡುತ್ತವೆ; ನೀರಿನೊಡನೆ ಹೊರಹೋಗಲಾಗದೆ ಬಾಯಲ್ಲೇ ಉಳಿವ ರಾಶಿ ಮೀನುಗಳನ್ನು ನುಂಗುತ್ತವೆ. ಇದು ಅವುಗಳ ಬೇಟೆಯ ಕ್ರಮ.
- ಹಾಡುವ ತಿಮಿಂಗಿಲಗಳಲ್ಲೆಲ್ಲ ಗೂನು ತಿಮಿಂಗಿಲಗಳದೇ ಅತ್ಯಂತ ವೈವಿಧ್ಯದ, ಬಹು ಸಂಕೀರ್ಣವೂ ಆದ ಗಾಯನ ವ್ಯವಸ್ಥೆ. ಸಂತಾನ ಕಾಲದಲ್ಲಿ ಹೆಣ್ಣು ತಿಮಿಂಗಿಲಗಳನ್ನು ಆಕರ್ಷಿಸುವುದೇ ಇವುಗಳ ಗಾಯನದ ಪ್ರಧಾನ ಉದ್ದೇಶ. ಆದ್ದರಿಂದಲೇ ಹಕ್ಕಿಗಳಲ್ಲಿರುವಂತೆಯೇ ಗೂನು ತಿಮಿಂಗಿಲಗಳಲ್ಲೂ ವಯಸ್ಕ ಗಂಡುಗಳಷ್ಟೇ ಹಾಡುತ್ತವೆ.




- ಕಡಲಲ್ಲಿ ಅತ್ಯಂತ ಸಮೃದ್ಧವಾಗಿ ಆಹಾರ ಲಭ್ಯವಿರುವ ಶೀತಲ ಜಲದ ಪ್ರದೇಶಗಳಲ್ಲೇ ಈ ತಿಮಿಂಗಿಲಗಳದು ವಾಸ. ಆದರೆ ಸಂತಾನ ಕಾಲದಲ್ಲಿ ಮಾತ್ರ ಬೆಚ್ಚನೆಯ ನೀರಿನ ಸಮಭಾಜಕದ ಕಡೆಗೆ ಈ ತಿಮಿಂಗಿಲಗಳು ಪ್ರತಿವರ್ಷ ವಲಸೆ ಹೋಗುತ್ತವೆ; 3000 ಕಿ.ಮೀ. ದೂರದ ಪಯಣವನ್ನು ಸಮೀಪ 30 ದಿನಗಳಲ್ಲಿ ಮುಗಿಸುತ್ತವೆ. ಚಳಿಗಾಲ ಮುಗಿದೊಡನೆ ತಮ್ಮ ನವಜಾತ ಶಿಶುಗಳೊಡನೆ ತಮ್ಮ ಮೂಲ ನೆಲೆಗೇ ಹಿಂದಿರುಗುತ್ತವೆ!

■ ಎನ್. ವಾಸುದೇವ್